<u>ದಿನಾಂಕ**: 18-08-2026**ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನವನ್ನು ಬೋಧಿಸಲಾಯಿತು.</u>

<u>**ಪಾಟೀ ಸವಾಲುಃ** ಪ್ರತಿವಾದಿ ಪರ ವಕೀಲರಾದ ಶ್ರೀ **MJS** ರವರಿಂದಃ</u>

ನಾನು 10 ನೇ ತರಗತಿ ವರೆಗೆ ಓದಿದ್ದೇನೆ. ದಿಃ25.02.2020 ರಂದು ಜಾಗ ಖರೀದಿ ಮಾಡಿದ್ದೇನೆ. ನಾನು ರಾಮಚಂದ್ರ ಜಾದವ ಕಡೆಯಿಂದ ಖರೀದಿ ಮಾಡಿದ್ದೇನೆ. ನಾನು ಖರೀದಿ ಪತ್ರ ಹಾಜರುಮಾಡಿಲ್ಲ ಎಂದರೆ ಸರಿಯಲ್ಲ. ನಾನು ಹಾಜರುಮಾಡಿರುವ ದಾಖಲೆಗಳಲ್ಲಿ ಖರೀದಿ ಪತ್ರ ಇಲ್ಲ ಎಂದರೆ ಸರಿ. ನಾನು ಖರೀದಿಪತ್ರವನ್ನು ಬಾಂಡ್ ಮೇಲೆ ಮಾಡಿದ್ದೇನೆ. ನಾನು ಒಟ್ಟು 4 ಗುಂಟೆ ಜಮೀನು ಖರೀದಿ ಮಾಡಿದ್ದೇನೆ. 4 ಗುಂಟೆ ಜಮೀನು ಖರೀದಿ ಮಾಡಿರುವುದನ್ನು ತೋರಿಸಲು ದಾಖಲೆ ಹಾಜರುಮಾಡಿಲ್ಲ ಎಂದರೆ ಸರಿಯಲ್ಲ. ನಾನು ಖರೀದಿ ಮಾಡುವ ಪೂರ್ವದಲ್ಲಿ ನನ್ನ ಆಸ್ತಿಯ ಪಶ್ಚಿಮಕ್ಕೆ ಪ್ರತಿವಾದಿಯ ಜಾಗ ಇತ್ತು ಎಂದರೆ ಸರಿ. ನನಗೆ ದಾವಾ ಸ್ವತ್ತಿನ ಚಕ್ಕುಬಂದಿ ಗೊತ್ತಿದೆ. ವಾದಿ ಪೂರ್ವ - ಪಶ್ಚಿಮ 51 ಅಡಿ ಅಗಲ ದಕ್ಷಿಣದ ಕಡೆಗೆ, ಖರೀದಿ ಮಾಡಿದ್ದಾರೆ ಎಂದರೆ ನನಗೆ ಗೊತ್ತಿಲ್ಲ. ಅದೇ ರೀತಿ ಪೂರ್ವ- ಪಶ್ಚಿಮ ಉತ್ತರದ ಕಡೆಗೆ 63 ಅಡಿ ಅಗಲ ಖರೀದಿಮಾಡಿದ್ದಾರೆ ಎಂದರೆ ನನಗೆ ಗೊತ್ತಿಲ್ಲ. ಅದೇ ರೀತಿ ದಕ್ಷಿಣ - ಉತ್ತರ 35 ಅಡಿ ಅಗಲ ಇದೆ ಎಂದರೆ ನನಗೆ ಗೊತ್ತಿಲ್ಲ. ಪ್ರತಿವಾದಿಯ ಆಸ್ತಿಯ ಪಶ್ಚಿಮ ದಿಕ್ಕಿಗೆ ಬೆಳಗಾವಿ - ಖಾನಾಪೂರ ರಸ್ತೆ ಇದೆ ಎಂದರೆ ಸರಿ. ಪ್ರತಿವಾದಿ ಖರೀದಿ ಮಾಡುವಾಗ ಸದರಿ ಸ್ವತ್ತಿನಲ್ಲಿ 3 ಅಂಗಡಿಗಳು ಇದ್ದವು ಎಂದರೆ ಸರಿಯಲ್ಲ. ಸದರಿ ಅಂಗಡಿಗಳು ಬಿದ್ದು ಹೋದ ಸ್ಥಿತಿಯಲ್ಲಿ ಇದ್ದ ಕಾರಣ ಪ್ರತಿವಾದಿ ಸದರಿ ಅಂಗಡಿಗಳನ್ನು ಬಿಳಿಸಿದ್ದಾರೆ ಎಂದರೆ ನನಗೆ ಗೊತ್ತಿಲ್ಲ. ಅಂಗಡಿಗಳನ್ನು ಬೀಳಿಸಿ 2 ವರ್ಷ ಆಗಿದೆ ಎಂದರೆ ಸರಿಯಲ್ಲ.

ಪ್ರತಿವಾದಿ ಯಾರಿಂದ ಆಸ್ತಿ ಖರೀದಿ ಮಾಡಿದ್ದಾರೆ ಎಂದರೆ ನನಗೆ ಗೊತ್ತಿಲ್ಲ. ಪ್ರತಿವಾದಿ ಅನಂತ ಲಾಡ್ ರವರಿಂದ ಆಸ್ತಿ ಖರೀದಿ ಮಾಡಿದ್ದಾರೆ ಎಂದು ನನಗೆ ಗೊತ್ತಿಲ್ಲ. ಪ್ರತಿವಾದಿ ಮೂಲ ಮಾಲೀಕರ ಸಾಕ್ಷ್ಯವನ್ನು O.S. No. 1644/2023 ರಲ್ಲಿ ಮಾಡಿಸಿದ್ದಾರೆ ಎಂದರೆ ನನಗೆ ಗೊತ್ತಿಲ್ಲ. ಪ್ರತಿವಾದಿ ನನ್ನ

ಮೇಲೆ ಕೇಸು ಹಾಕಿದ್ದಾರೆ ಎಂದು ನನಗೆ ಗೊತ್ತಿಲ್ಲ. ಪ್ರತಿವಾದಿಯ ಆಸ್ತಿಯ ಪೂರ್ವಕ್ಕೆ ನನ್ನ ಆಸ್ತಿ ಇದೆ ಎಂದರೆ ಸರಿ. ಪ್ರತಿವಾದಿಯ ಆಸ್ತಿಗೆ ಹೋಗಲು ಪಶ್ಚಿಮದಿಕ್ಕಿನಲ್ಲಿ ಪೇವರ್ಸ್ ಹಾಕಿಸಿದ್ದಾರೆ ಎಂದರೆ ಸರಿಯಲ್ಲ. ನಿಪಿ-13 ರಲ್ಲಿ ಕಾಣುವ ಪೇವರ್ಸ್ ನ್ನು ಪ್ರತಿವಾದಿ ಹಾಕಿಸಿದ್ದಾರೆ ಎಂದರೆ ಸರಿಯಲ್ಲ. ನಿಪಿ-13 ರಲ್ಲಿ ಕಾಣುವಂತೆ ರಸ್ತೆ ಇದೆ ಎಂದರೆ ಸರಿ. ನಿಪಿ-13 ರಲ್ಲಿ ಬೈಕ್ ಹತ್ತಿರ ಕಾಣುವ ಮನೆ ನನ್ನ ಮನೆ ಎಂದರೆ ಸರಿ. ಎರಡೂ ಕಡೆ ರಸ್ತೆ ಇದೆ ಎಂದು ತೋರಿಸುವ ದಾಖಲೆ ಹಾಜರುಮಾಡಿಲ್ಲ. ಪಶ್ಚಿಮದಿಂದ ಪೂರ್ವಕ್ಕೆ ಹೋಗಲು 10 ಅಡಿ ಅಗಲ ಹಾಗೂ 51 ಅಡಿ ಉದ್ದ ರಸ್ತೆ ಇರುತ್ತದೆ ಎಂದರೆ ಸರಿ. ಪ್ರತಿವಾದಿಯ ಜಾಗವನ್ನು ಕಬ್ಜಾ ಮಾಡಲು ಚೌಕಟ್ಟನ್ನು ಮತ್ತು ಕಿಟಿಕಿಯನ್ನು ಹೊಸದಾಗಿ ಹಾಕಿದ್ದೇನೆ ಎಂದರೆ ಸರಿಯಲ್ಲ. ನಾನು ಕಿಟಕಿ ಮತ್ತು ಚೌಕಟ್ಟನ್ನು ಕೂರಿಸಿದ್ದಕ್ಕೆ ಉದ್ಯಮಭಾಗ್ ಠಾಣೆಯಲ್ಲಿ ನನ್ನ ವಿರುದ್ಧ FIR ದಾಖಲಾಗಿದೆ ಎಂದರೆ ಸರಿ. ನನ್ನ ಆಸ್ತಿಯ ಉತ್ತರಕ್ಕೆ ಕಾಂಬಳೆ ರವರ ಮನೆ ಇದೆ. ನಿಪಿ-13 ರಲ್ಲಿ ಕಾಣುವ ಶೆಡ್ ನ್ನು ರಾಮಚಂದ್ರ ಜಾದವ್ ಕಟ್ಟಿದ್ದಾರೆ. ನಾನು ಶೆಡ್ ಕಟ್ಟುವ ಸಮಯದಲ್ಲಿ ಪ್ರತಿವಾದಿ ನನ್ನ ವಿರುದ್ಧ ಕೇಸು ಮಾಡಿದ್ದಾರೆ ಎಂದರೆ ಸರಿಯಲ್ಲ. ಪ್ರತಿವಾದಿ ನನ್ನ ಮೇಲೆ ದೂರು ಕೊಟ್ಟ ನಂತರ ನಾನು ಪ್ರತಿವಾದಿಯ ಮೇಲೆ ದೂರು ಕೊಟ್ಟಿದ್ದೇನೆ ಎಂದರೆ ಸರಿ. ಪೊಲೀಸರು ನನ್ನ ಮತ್ತು ಪ್ರತಿವಾದಿಯ ಮೇಲೆ ಅಂತಿಮ ವರದಿ ಸಲ್ಲಿಸಿದ್ದಾರೆ ಎಂದರೆ ಸರಿ. ನಾನು ಹಾಕಿದ ದೂರನ್ನು ನಂತರ ನಾನು ವಾಪಸ್ಸು ಪಡೆದುಕೊಂಡಿದ್ದೇನೆ ಎಂದರೆ ಸರಿ. ನಾನು ಕಳ್ಳಬಟ್ಟಿ ಮಾರುತ್ತೇನೆ ಎಂದು ಹಲವಾರು ಕೇಸುಗಳನ್ನು ದಾಖಲು ಮಾಡಲಾಗಿದೆ ಎಂದರೆ ಸರಿಯಲ್ಲ. ನನ್ನ ಮುಖ್ಯ ಕೆಲಸ ಎಂದರೆ ಕಳ್ಳ ಬಟ್ಟಿ ಮಾಡುವುದು ಎಂದರೆ ಸರಿಯಲ್ಲ. ನನ್ನ ಜೊತೆ 25 ಹುಡುಗರು ಈಗಲೂ ಕಳ್ಳ ಬಟ್ಟಿ ಕೆಲಸದಲ್ಲಿ ಭಾಗಿ ಯಾಗಿದ್ದಾರೆ ಎಂದರೆ ಸರಿಯಲ್ಲ. ನಾನು ಸರ್ಕಾರಿ ಕೆಲಸ ಮಾಡುತ್ತಿರಲಿಲ್ಲ. ನಾನು ಎಲೆಕ್ಟ್ರಿಕಲ್ ಕೆಲಸ ಮಾಡುತ್ತಿದ್ದೆ.

**ಮುಂದುವರೆದ ಪಾಟೀ ಸವಾಲುಃ** ಪ್ರತಿವಾದಿ ಪರ ವಕೀಲರು ಸಮಯಾವಕಾಶ ಕೋರಿದ್ದು ಮುಂದೂಡಲಾಯಿತು.

ತೆರೆದ ನ್ಯಾಯಾಲಯದಲ್ಲಿ ಈ ಮೇಲೆ ಸಾಕ್ಷಿ ಸ್ವತಃ ಹೇಳಿದ ಸಾಕ್ಷ್ಯವನ್ನು ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಿಸಲಾಯಿತು.

ಓ ಹೇ ಕೇ ಸ ಇದೆ.

Sd/-

**1 ನೇ ಅಪರ ಸಿವಿಲ್ ಜಡ್ಜ್ ಮತ್ತು ಜೆಎಂಎಫ್‌ಸಿ.,**
**ಬೆಳಗಾವಿ.**

**O.S. No. 1440/2023**
**PW: 1**